ಅಧ್ಯಕ್ಷರು : ಒಂದು ಕೆಲಸ ಮಾಡೋಣ even if we sit for little late, we will come to a consenses about it; We can take it up, since we have already discussed it ...

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ಧರಣಿ ನಡೆಸುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಇವತ್ತು ಒಂದು ದಿವಸ ಬೇಡ.

ಶ್ರೀ. ವಾಟಾಳ್ ನಾಗರಾಜ್ : ಧರಣಿ ನಡೆಸುವುದಕ್ಕೆ ನಮಗೆ ಅವಕಾಶ ತಾವು ಕೊಡುವುದಿಲ್ಲವೇ?

ಅಧ್ಯಕ್ಷರು : ನಿಜ ಹೇಳುತ್ತೇನೆ, ನಮಗೆ ನಾಳೆ ಬಹಳ ದುಃಖದ ದಿವಸ. ಅಂದರೆ ನಾಳೆ ಗುಡ್‌ಫ್ರೈಡೆ ಆಗಿರುತ್ತದೆ. ನಾನು ಇನ್‌ಫೆಂಟ್ ಜೀಸಸ್‌ನ ಪಾಲೋಯರ್. ನನಗೆ ಆ ಟ್ರೆಂಡ್ ಏಕೋ ಇವತ್ತೇ ಸೆಟ್‌ಇನ್ ಆಗಿಬಿಟ್ಟಿದೆ. ನಾಳೆ ಇರಬೇಕಾದ ದುಃಖ ಇವತ್ತೇ ಪ್ರಾರಂಭವಾಗಿದೆ. ಇವತ್ತು ಒಂದು ದಿವಸಕ್ಕೆ ಧರಣಿ ಏನೂ ಬೇಡ. ಸ್ವಲ್ಪ ಬೇರೆ ವಿಷಯಗಳ ಬಗ್ಗೆ ಕುಳಿತು ಚರ್ಚೆ ಮಾಡೋಣ.

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಹತ್ತಿ ಬೀಜದ ದರವನ್ನು ಜಾಸ್ತಿ ಮಾಡಿದ್ದರಿಂದ ರೈತರು ಧರಣಿ ಪ್ರಾರಂಭಿಸಿದ್ದಾರೆ, ಹೆಗ್ಗಡದೇವನಕೋಟೆಯಲ್ಲಿ ರೈತರ ಮೇಲೆ ಪೋಲೀಸರಿಂದ ಧಾಳಿಯಾಗಿದೆ.

ಅಧ್ಯಕ್ಷರು : ಬಹಳ ಜನ ಬಹಳಷ್ಟು ವಿಷಯಗಳ ಮೇಲೆ ನೋಟೀಸಸ್ ಕೊಟ್ಟಿದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡಬೇಕು. ಆಗ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ. ವಾಟಾಳ್ ನಾಗರಾಜ್ : ಅದಕ್ಕೆ ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಅನ್ಯಾಯವನ್ನು ಪ್ರತಿಭಟಿಸಿ ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀ. ವಾಟಾಳ್ ನಾಗರಾಜ್ ಅವರು ಧರಣಿ ಕುಳಿತುಕೊಳ್ಳಲು ಸದನದ ಬಾವಿಗೆ ಆಗಮಿಸಿದರು)

ಶ್ರೀ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದೇ ವಿಚಾರದ ಬಗ್ಗೆ ನಾವೂ ಕೂಡ ಮಾತನಾಡಬೇಕಾಗಿದೆ. ಇವರು ಪದೇ ಪದೇ ಧರಣಿಗೆ ಶರಣುಹೋದರೆ ಕಷ್ಟ ಆಗುತ್ತದೆ. ಸರ್ಕಾರಕ್ಕೆ ವಿಷಯವನ್ನು ತಿಳಿಸಿ ಧರಣಿ ಮಾಡಿದರೆ ಅಡ್ಡಿ ಇಲ್ಲ. ವಿಷಯವೇ ಜಗತ್ತಿಗೆ ಗೊತ್ತಾಗದೆ ಇದ್ದರೆ ತಾವು ಧರಣಿ ಕುಳಿತು ಏನೂ ಪ್ರಯೋಜನ ಇಲ್ಲ.

ಅಧ್ಯಕ್ಷರು : ದಯಮಾಡಿ ತಮಗಾಗಿ ಒದಗಿಸಿರುವ ಆಸನದಲ್ಲಿ ಆಸೀನರಾಗಿ ವಾಟಾಳ್‌ರವರೇ ದಯಮಾಡಿ ಸಹಕರಿಸಿ. ಸಾಮಾನ್ಯವಾಗಿ ನಮ್ಮ ಎಲ್ಲಾ ಸದಸ್ಯರು ಬಿಳಿ ಉಡುಪನ್ನು ಬಹಳ ಪ್ರಯಾಸ ಪಟ್ಟು ವಾಷ್ ಮಾಡಿಸಿ ಹಾಕಿಕೊಂಡು ಬರುತ್ತಾರೆ. ಅದಕ್ಕಾಗಿ ನಮ್ಮ ಚೇರ್ಸ್ ಎಲ್ಲಾ ನೀಟಾಗಿ ಇಟ್ಟಿರುತ್ತೇವೆ. ಅಲ್ಲಿ ಕೊಳೆ ಇರುತ್ತದೆ. ನೀವು ಅಲ್ಲಿ ಕುಳಿತು ಕೊಂಡು ಆ ಬಟ್ಟೆಯನ್ನೆಲ್ಲಾ ಕೊಳೆ ಮಾಡಿಕೊಳ್ಳುವುದು ಬೇಡ. ನನಗೆ ನಿಮ್ಮ ಮೇಲೆ ಇರುವುದಕ್ಕಿಂತ ಆ ಬಟ್ಟೆ ಮೇಲೆ ಪ್ರೀತಿ ಅದು ಶುಭ್ರವಾಗಿರಲಿ ಅಂತ. ಈಗ ಕಲಾಪವನ್ನು ಪ್ರಾರಂಭ ಮಾಡೋಣ. ಶ್ರೀ. ಶಿವಾನಂದನಾಯ್ಕ್